**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.06.11.2024**

## ಪಾಟಿ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಎಮ್ ಎನ್ ವಕೀಲರಿಂದಃ

1. ನಾನು ಕಾರ್ ಶೋರೂಂ ನಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಕೋಲಾರದಲ್ಲಿ ವಾಸವಾಗಿರುತ್ತೇನೆ. ನಮ್ಮ ಮನೆಯ ಪೂರ್ವ ದಿಕ್ಕಿಗೆ ಕಿಟಕಿ ಹಾಕುತ್ತಿರುವಾಗ ಪ್ರತಿವಾದಿಯು ಸದರಿ ಕಿಟಕಿ ಹಾಕುವ ಬಗ್ಗೆ ತಕರಾರು ಮಾಡಿದ ಕಾರಣ ಈ ದಾವೆ ಸಲ್ಲಿಸಿರುತ್ತೇನೆ. ನಾನು ಖರೀದಿಸಿರುವ ದಾವಾ ನಿವೇಶನವು ಸರ್ವೆ ನಂಬರ್ ಆಸ್ತಿಯಲ್ಲಿ ಇತ್ತು. ಸದರಿ ಜಮೀನು ಭೂ ಪರಿವರ್ತನೆ ಆಗಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.48/2 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ.48/2 ರ ಅಕ್ಕ ಪಕ್ಕದಲ್ಲಿ ಯಾವ ಸರ್ವೆ ನಂಬರ್ ಆಸ್ತಿ ಹೊಂದಿಕೊಂಡಿದೆ ಎಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ.48/2 ರ ಆಸ್ತಿಯ ಪೂರ್ವ ದಿಕ್ಕಿಗೆ ಸರ್ವೆ ನಂ.50/1 ಆಸ್ತಿ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.50/1 ಆಸ್ತಿಯು ಪ್ರತಿವಾದಿಗಳಿಗೆ ಸೇರಿದ್ದು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

2. ದಾವಾ ಆಸ್ತಿಯನ್ನು ಖರೀದಿ ಮಾಡುವ ಮೊದಲು ಖಾತೆ ದಾಖಲೆಗಳನ್ನು ನೋಡಿ ಖರೀದಿಸಿರುತ್ತೇನೆ. ಆ ರೀತಿ ನಾನು ನೋಡಿದ್ದ ದಾಖಲೆಗಳು ಪದ್ಮಮ್ಮ ರವರ ಹೆಸರಿನಲ್ಲಿ ಇದ್ದವು. ಸರ್ವೆ ನಂ.48/2 ಆಸ್ತಿಯು ಲೇಔಟ್ ನ್ನು ಮೋಹನ್ ರಾಜ್ ರವರು ನಿರ್ಮಾಣ ಮಾಡಿರುತ್ತಾರೆ, ಆದರೆ ನಾನು ಪದ್ಮಮ್ಮ ರವರಿಂದ ದಾವಾ ಆಸ್ತಿಯನ್ನು ಖರೀದಿಸಿರುತ್ತೇನೆ. ಸದರಿ ಲೇಔಟ್ ನ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಆ ರೀತಿ ಯಾವುದೇ ನಕ್ಷೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯನುನ ಖರೀದಿಸಿದ ನಂತರ ಸಂಬಂದಪಟ್ಟ ಪಂಚಾಯಿತಿಯಿಂದ ಇ ಖಾತೆ ಪಡೆದಿರುವುದಿಲ್ಲ ಎಂದರೆ ಸರಿ. ಸರ್ವೆ ನಂ.48/2 ರ ಮಾಲಿಕರು ಸರ್ ಸರ್ವೆ ನಂ.50/1 ರಲ್ಲಿ 12 ಗುಂಟೆ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದ ಬಗ್ಗೆ ಪ್ರತಿವಾದಿಯ ತಂದೆ ದೂರು ನೀಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

3. ಗೋಪಾಲ್ ಸಿಂಗ್ ಎಂಬುವವರು ನನ್ನ ದೊಡ್ಡಪ್ಪ. ಅದೇ ರೀತಿ ನಾನು ಮತ್ತು ನನ್ನ ದೊಡ್ಡಪ್ಪ ಪ್ರತಿವಾದಿಯ ಸರ್ವೆ ನಂ.50/1 ನ್ನು ಒತ್ತುವರಿ ಮಾಡಿಕೊಂಡಿದ್ದೆವು ಎಂದು ದಿಃ03.01.2018 ರಂದು ದೂರು ನೀಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ದೂರು ನೀಡಿದ ನಂತರ ನನ್ನ ದೊಡ್ಡಪ್ಪ ಗೋಪಾಲ್ ಸಿಂಗ್ ಪೋಲಿಸ್ ಠಾಣೆಗೆ ಹಾಜರು ಆಗಿ ಒಂದು ವೇಳೆ ಒತ್ತುವರಿ ಆಗಿದ್ದರೆ ಜಂಟಿ ಸರ್ವೆ ಮಾಡಿಸಿ ಪ್ರತಿವಾದಿಗಳಿಗೆ ಬಿಟ್ಟುಕೊಡುತ್ತೇವೆ ಎಂದು ಹೇಳಿಕೆ ನೀಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ತದ ನಂತರ ಸರ್ವೆ ನಂ.48/2 ರ ಮೂಲ ಮಾಲಿಕರು ಮತ್ತು ಪ್ರತಿವಾದಿಗಳು ತಮ್ಮ ಆಸ್ತಿಗಳನ್ನು ಜಂಟಿ ಸರ್ವೆ

ಮಾಡಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಜಂಟಿ ಸರ್ವೆಯಲ್ಲಿ ಪ್ರತಿವಾದಿಗಳ ಸರ್ವೆ ನಂ.50/1 ರಲ್ಲಿ 12 ಗುಂಟೆ ಜಮೀನು ಒತ್ತುವರಿ ಆಗಿರುವುದು ಸತ್ಯ ಎಂದು ನಕ್ಷೆಯನ್ನು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.48/2 ರ ಗಡಿ ಎಲ್ಲಿವರೆಗೆ ಬರುತ್ತದೆ ಎಂದು ಪರಿಶೀಲಿಸಿ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ.

4. ಪ್ರತಿವಾದಿಗಳು ಯಾವ ದಿನಾಂಕದಂದು ಬಂದು ನಮ್ಮ ಸ್ವಾದೀನಕ್ಕೆ ತೊಂದರೆ ಕೊಟ್ಟರು ಎಂದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಗಳು ಸರ್ವೆ ನಂ.50/1 ರಲ್ಲಿ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ನಮ್ಮ ಸ್ವಾದೀನಕ್ಕೆ ಯಾವುದೇ ತೊಂದರೆ ಕೊಟ್ಟಿರುವುದಿಲ್ಲ ನಾವೇ ಅವರ ಆಸ್ತಿಯನ್ನು ಒತ್ತುವರಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಗಳ ಆಸ್ತಿಯಲ್ಲಿ ಆಗಿರುವ ಒತ್ತುವರಿ ಬಗ್ಗೆ ಜಂಟಿ ಸರ್ವೆ ಮಾಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಈ ದಾವೆ ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ.

**(ಈ ಹಂತದಲ್ಲಿ ಮುಂದುವರಿದ ಪಾಟಿ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**